ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಪಟ್ಟಿ – ೧೦

ಒಟ್ಟು ಪ್ರಶ್ನೆಗಳು – ೧೫

# ಕರ್ನಾಟಕ ವಿಧಾನಸಭೆ

## ಹದಿನೈದನೇ ವಿಧಾನಸಭೆ

## ಎರಡನೇ ಅಧಿವೇಶನ

## ಶುಕ್ರವಾರ, ದಿನಾಂಕ ೨೧ನೇ ಡಿಸೆಂಬರ್, ೨೦೧೮

---

## ಸಮೂಹ – 'ಉ–E'

೧. ಮಾನ್ಯ ಕೃಷಿ ಸಚಿವರು.

೨. ಮಾನ್ಯ ಸಮಾಜ ಕಲ್ಯಾಣ ಸಚಿವರು.

೩. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

೪. ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು.

೫. ಮಾನ್ಯ ತೋಟಗಾರಿಕೆ ಸಚಿವರು.

೬. ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು.

---

## ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ

**ಶ್ರೀ ಲಿಂಗೇಶ್ ಕೆ.ಎಸ್. (ಬೇಲೂರು) –**

೧೩೬ (೨೨೩೯) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೇಲೂರು ತಾಲ್ಲೂಕಿನ ಬಿಕ್ಕೋಡುನಲ್ಲಿರುವ ಡಾ: ಅಂಬೇಡ್ಕರ್ ವಸತಿಶಾಲೆ ಹಾಗೂ ಹಗರೆಯಲ್ಲಿರುವ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸ್ವಂತ ಕಟ್ಟಡ ಮಂಜೂರು ಮಾಡಲಾಗುವುದೇ ?

## ಬೆಳೆ ಹಾನಿ ಪರಿಹಾರ

**ಶ್ರೀ ಹರೀಶ್ ಪೂಂಜ (ಬೆಳ್ತಂಗಡಿ) –**

೧೩೭ (೨೨೦೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಮತ್ತು ಕೇಂದ್ರ ಸರ್ಕಾರ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಬೆಳೆ ಹಾನಿಗೆ ಯಾವ ಮಾನದಂಡ/ನಿಯಮಾವಳಿಗಳನ್ನು ಅನುಸರಿಸಿ ಪರಿಹಾರ ನೀಡಲಾಗುತ್ತಿದೆ ;

(ಆ) ಸರ್ಕಾರ ಪ್ರತಿ ರೈತರಿಗೆ ಪ್ರತಿ ಎಕರೆ/ಹೆಕ್ಟೇರ್‌ಗೆ ಬೆಳೆ ಹಾನಿಯ ಆಧಾರದ ಮೇಲೆ ನೀಡುವ ಪರಿಹಾರವೆಷ್ಟು ;

(ಇ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನ ಅಂತ್ಯಕ್ಕೆ ಬೆಳೆ ಹಾನಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮೀಸಲಿರಿಸಿರುವ ಹಾಗೂ ಖರ್ಚಾದ ಅನುದಾನ ಎಷ್ಟು ; ಫಲಾನುಭವಿ ರೈತರ ಸಂಖ್ಯೆ ಎಷ್ಟು ?

## ಗಂಗಾ ಕಲ್ಯಾಣ ಯೋಜನೆ

**ಶ್ರೀ ಎಮ್. ಚಂದ್ರಪ್ಪ (ಹೊಳಲ್ಕೆರೆ) –**

೧೩೮ (೨೨೩೮) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬–೧೭ರಲ್ಲಿ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರಕ್ಕೆ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿಯ ಜನಾಂಗದವರಿಗೆ ಕೊರೆದ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ೨೦೧೭–೧೮ನೇ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯವರಿಗೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ, ಪರಿಶಿಷ್ಟ ಪಂಗಡದವರಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಕೊರೆದ ವೈಯಕ್ತಿಕ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ವೈಯುಕ್ತಿಕ ಕೊಳವೆ ಬಾವಿಗಳನ್ನು ಕೊರೆಯಲು ಫಲಾನುಭವಿಗಳಿಗೆ ಎಷ್ಟು ಎಕರೆ ಜಮೀನು ಇರಬೇಕಾಗುತ್ತದೆ ; (ಮಾಹಿತಿ ನೀಡುವುದು)

(ಈ) ಈ ಕೊಳವೆ ಬಾವಿಗಳನ್ನು ಕೊರೆಯಲು ಯಾವ ರೀತಿ ಟೆಂಡರ್ ಕರೆಯಲಾಗಿದೆ; ಯಾವ ಯಾವ ಏಜೆನ್ಸಿಗಳಿಗೆ ಟೆಂಡರ್ ನೀಡಲಾಗಿದೆ ; (ವಿವರ ನೀಡುವುದು)

(ಉ) ಟೆಂಡರ್ ಕರೆಯದೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂಬ ಮಾಹಿತಿ ಇದ್ದಲ್ಲಿ, ನಿಯಮಗಳನ್ನು ಉಲ್ಲಂಘನೆ ಮಾಡಿರುವ ಅಧಿಕಾರಿಗಳ ಹೆಸರು ಹಾಗೂ ಇವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ಒದಗಿಸುವುದು)

(ಊ) ಕಾನೂನು ಉಲ್ಲಂಘನೆ ಮಾಡಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕರುಗಳ ಮೇಲೆ ಯಾವ ರೀತಿಯ ಕ್ರಮ ಜರುಗಿಸಲಾಗಿದೆ ;

(ಋ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸಿಕೊಂಡಿರುವ ಎರಡು ಅಭಿವೃದ್ಧಿ ನಿಗಮಗಳ ಫಲಾನುಭವಿಗಳ ಪಟ್ಟಿ ಯಾವ ಯಾವ ಫಲಾನುಭವಿಗಳ ಜಮೀನಿನಲ್ಲಿ ಎಷ್ಟೆಷ್ಟು ಅಡಿಗಳನ್ನು ಕೊರೆಯಲಾಗಿದೆ, ಪ್ರತಿ ಫಲಾನುಭವಿಗಳ ಜಮೀನಿನ ಸರ್ವೆ ನಂಬರ್‌ಗಳು ಹಾಗೂ ಅವರ ಹೆಸರಿನಲ್ಲಿ ಕೊಳವೆ ಬಾವಿಗಳಿಗೆ ಹಣ ಸಂದಾಯವಾಗಿರುವ ಮಾಹಿತಿ ನೀಡುವುದು?

## ಕೃಷಿ ಯಂತ್ರ ಸರಬರಾಜು

**ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ) –**

೧೩೪ (೨೧೮೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ರೈತರಿಗೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ರೂಟರ್, ಡಬಲ್‌ಪಲ್ಟಿ, ಮೇವು ಕತ್ತರಿಸುವ ಯಂತ್ರ ಮುಂತಾದ ಕೃಷಿ ಸಾಮಗ್ರಿಗಳನ್ನು ಸರ್ಕಾರ ಪೂರೈಸುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳ ಅವಧಿಯಲ್ಲಿ ಸರ್ಕಾರ ಪೂರೈಸಿದ ಯಂತ್ರ ಸಾಮಗ್ರಿಗಳೆಷ್ಟು ; ಸರ್ಕಾರಕ್ಕೆ ತಗುಲಿದ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇಲ್ಲದಿದ್ದಲ್ಲಿ, ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ಸ್ಮಾರಕಗಳ ನಿರ್ವಹಣೆ

**ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) –**

೧೪೦ (೨೨೧೧) ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದಲ್ಲಿರುವ ಪ್ರಾಚೀನ, ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಾದ ಬಿಜಾಪುರ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಸವದತ್ತಿ, ಬೆಳಗಾವಿ, ಕಿತ್ತೂರು, ನಂದಗಡ ಮುಂತಾದ ಗ್ರಾಮಗಳಲ್ಲಿರುವ ಸ್ಮಾರಕಗಳು ಸರಿಯಾದ ನಿರ್ವಹಣೆ ಇಲ್ಲದೇ ನಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅವುಗಳ ಸಂರಕ್ಷಣೆಗೆ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಸದರಿ ಪ್ರೇಕ್ಷಣೀಯ ಸ್ಥಳಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸಿಗರು ಭೇಟಿ ನೀಡಲು ಉತ್ತೇಜಿಸುವಂತೆ ಸರ್ಕಾರವು ಯಾವ ಯಾವ ಯೋಜನೆಗಳನ್ನು ರೂಪಿಸಿದೆ ;

(ಈ) ಆ ಸ್ಥಳಗಳಲ್ಲಿ ಪ್ರವಾಸಿಗರು ತಂಗಲು ಒಳ್ಳೆಯ ವಸತಿ ಸೌಲಭ್ಯ/ರೆಸಾರ್ಟ್‌ಗಳ ನಿರ್ಮಾಣಕ್ಕೆ ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ ? (ವಿವರ ನೀಡುವುದು)

## ಲಿಂಬೆ ಅಭಿವೃದ್ಧಿ ಮಂಡಳಿ

**ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) –**

೧೪೧ (೨೧೮೪) ಮಾನ್ಯ ತೋಟಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇಂಡಿ ಪಟ್ಟಣದಲ್ಲಿರುವ ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಗೆ ಸೂಕ್ತ ಜಮೀನು, ಸಿಬ್ಬಂದಿ, ಶೀಥಲಗೃಹ, ಮಾರುಕಟ್ಟೆ ಯಾರ್ಡ್, ಗೋದಾಮು, ಖರೀದಿ ಕೇಂದ್ರ ಅವರ್ತನಿಧಿ, ತರಬೇತಿ ಕೇಂದ್ರ ಮೊದಲಾದ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕೈಗೊಂಡ ಕ್ರಮಗಳೇನು ;

(ಆ) ಶೀಥಲಗೃಹವನ್ನು ಯಾವಾಗ ನಿರ್ಮಾಣ ಮಾಡಲಾಗುವುದು ;

(ಇ) ಬೆಲೆ ಕುಸಿತವಾದಾಗ ಖರೀದಿ ಕೇಂದ್ರ (ಅವರ್ತಕನಿಧಿ)ಕ್ಕೆ ಎಷ್ಟು ಅನುದಾನ ಮೀಸಲಿರಿಸಲಾಗುವುದು ; ಯಾವಾಗ ಜಾರಿಗೆ ಬರುತ್ತದೆ ;

(ಈ) ಅಭಿವೃದ್ಧಿ ಮಂಡಳಿಗಳಿಗೆ ಸೂಕ್ತ ಕಟ್ಟಡ, ಶೀಥಲ ಗೃಹ ನಿರ್ಮಾಣ, ಗೋದಾಮು ನಿರ್ಮಾಣ, ಮಾರುಕಟ್ಟೆ, ತರಬೇತಿ ಕೇಂದ್ರ, ಪ್ರಯೋಗ ಶಾಲೆ ಮೊದಲಾದವುಗಳಿಗೆ ಅವಶ್ಯಕವಾದ ಜಮೀನು ಒದಗಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮಗಳೇನು ? (ವಿವರ ಒದಗಿಸುವುದು)

## ತೋಟಗಾರಿಕೆ ಯೋಜನೆಗಳು

**ಶ್ರೀ ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ) –**

೧೪೨ (೨೩೪೩) ಮಾನ್ಯ ತೋಟಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆ ಸಿರುಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ೩ ವರ್ಷಗಳಿಂದ ತೋಟಗಾರಿಕೆ ಇಲಾಖೆಯಿಂದ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳಾವುವು;

(ಆ) ಕಳೆದ ೩ ವರ್ಷಗಳಲ್ಲಿ ತೋಟಗಾರಿಕೆ ಅಡಿಯಲ್ಲಿ ಬೆಳೆದ ಬೆಳೆಗಳು ಯಾವುವು ; ಇವುಗಳಿಗೆ ನೀಡಿದ ಸಹಾಯಧನವೆಷ್ಟು ;

(ಇ) ವಿವಿಧ ಯೋಜನೆಗಳಿಂದ ಸಹಾಯಧನ ಪಡೆದ ಫಲಾನುಭವಿಗಳೆಷ್ಟು ? (ಸಂಪೂರ್ಣ ಗ್ರಾಮವಾರು ವಿವರ ಒದಗಿಸುವುದು)

## ಪ್ರಗತಿ ಕಾಲೋನಿ ಯೋಜನೆ

**ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ) –**

೧೪೩ (೧೨೮) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಪರಿಶಿಷ್ಟ ಪಂಗಡಗಳ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಪ್ರಗತಿ ಕಾಲೋನಿ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಆ) ಕೈಗೊಂಡಿದ್ದಲ್ಲಿ, ಗ್ರಾಮವಾರು, ಯೋಜನಾವಾರು ಸಂಪೂರ್ಣ ಮಾಹಿತಿಯನ್ನು ಮತ್ತು ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯನ್ನು ಒದಗಿಸುವುದು ?

## ಸಿಬ್ಬಂದಿ ಕೊರತೆ

**ಡಾ॥ ಕೆ. ಸುಧಾಕರ್ (ಚಿಕ್ಕಬಳ್ಳಾಪುರ) –**

೧೪೪ (೨೩೧೧) ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಬಳ್ಳಾಪುರ ತಾಲ್ಲೂಕು ಪಶುಸಂಗೋಪನಾ ಇಲಾಖೆಯ ತಾಲ್ಲೂಕು ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ 'ಡಿ' ಗ್ರೂಪ್ ನೌಕರರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಜಾನುವಾರುಗಳ ಕಾಲುಬಾಯಿ ರೋಗಕ್ಕೆ ಔಷಧಿಗಳನ್ನು ಎಲ್ಲಿಂದ ಪೂರೈಸಲಾಗುತ್ತದೆ ;

(ಇ) ಔಷಧಗಳ ಗುಣಮಟ್ಟ ಪರೀಕ್ಷಿಸಲಾಗಿದೆಯೇ ; ಸರ್ಕಾರದ ಸಂಸ್ಥೆಗಳಿಂದ ಔಷಧಗಳನ್ನು ಖರೀದಿಸುವ ಪ್ರಯತ್ನ ನಡೆಯುತ್ತಿದೆಯೇ ; (ವಿವರ ಒದಗಿಸುವುದು)

(ಈ) ಐದು ಸಾವಿರ ಜಾನುವಾರುಗಳಿಗೆ ಒಂದು ಪಶು ಆಸ್ಪತ್ರೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಉ) ಕೆಲವು ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ಒದಗಿಸುವುದು)

## ಗಂಗಾ ಕಲ್ಯಾಣ ಯೋಜನೆ

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪುರ) –**

೧೪೫ (೨೨೯೪) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ೨೦೧೫–೧೬ನೇ ಸಾಲಿನಿಂದ ಇಲ್ಲಿಯವರೆಗೆ ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;

(ಇ) ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪುಗಳನ್ನು ಅಳವಡಿಸದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

## ಶೂನ್ಯ ಬಂಡವಾಳ ಸಹಜ ಕೃಷಿ ಪದ್ಧತಿ

**ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ) –**

೧೪೬ (೨೩೪೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶೂನ್ಯ ಬಂಡವಾಳ ಸಹಜ ಕೃಷಿ ಪದ್ಧತಿ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆಯೇ ; ಯಾವ ಯಾವ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ಕೃಷಿ ಪದ್ಧತಿಯ ರೂಪುರೇಷೆಗಳೇನು ; ರೈತರಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆಯೇ ;

(ಇ) ಶೂನ್ಯ ಬಂಡವಾಳ ಸಹಜ ಕೃಷಿ ಪದ್ಧತಿ ಕಾರ್ಯಕ್ರಮಕ್ಕೆ ಈವರೆಗೆ ಎಷ್ಟು ಹಣ ವಿನಿಯೋಗಿಸಲಾಗಿದೆ ; ಈ ಪದ್ಧತಿ ಅಳವಡಿಸಿದ ರೈತರ ವಿವರಗಳನ್ನು ನೀಡುವುದು ? (ಜಿಲ್ಲಾವಾರು ರೈತರ ಹೆಸರು ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು)

## ವಿದ್ಯಾರ್ಥಿ ನಿಲಯಗಳ ನಿರ್ವಹಣೆ

**ಶ್ರೀ ಬಿ. ಶ್ರೀರಾಮುಲು (ಮೊಳಕಾಲ್ಮೂರು) –**

೧೪೭೭ (೨೩೪೭) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಮಂಜೂರಾದ ಅನುದಾನವೆಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಯಾವ ಯಾವ ಸಮ ವಸ್ತ್ರಗಳನ್ನು ನೀಡಲಾಗುತ್ತಿದೆ ; (ಪಟ್ಟಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯ ವಸ್ತುಗಳನ್ನು ಖರೀದಿಸುವ ಬಗ್ಗೆ ಟೆಂಡರ್ ಪ್ರಕ್ರಿಯೆಗಳನ್ನು ಯಾರು ಯಾರಿಗೆ ನೀಡಲಾಗಿದೆ;

(ಈ) ಟೆಂಡರ್‌ನಲ್ಲಿ ನಿಗದಿಪಡಿಸಿದ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಸಮಯದಲ್ಲಿ ಆಹಾರ ಸಾಮಗ್ರಿಗಳು ಮತ್ತು ಅಗತ್ಯ ವಸ್ತುಗಳು ಲಭ್ಯವಾಗದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಅತಿ ವೃಷ್ಟಿಯಿಂದ ಹಾನಿಯಾದ ತೋಟಗಾರಿಕೆ ಬೆಳೆಗಳು

**ಶ್ರೀ ಸಂಜೀವ್ ಮಠಂದೂರ್ (ಪುತ್ತೂರು) –**

೧೪೮ (೨೨೦೭) ಮಾನ್ಯ ತೋಟಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಅತೀ ವೃಷ್ಟಿಯಿಂದ ತೋಟಗಾರಿಕೆ ಬೆಳೆಗಳು ಹಾನಿಯಾದ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಅಡಿಕೆ ಬೆಳೆಗೆ ಹಾನಿಯಾಗಿದೆ; ಒಟ್ಟು ಎಷ್ಟು ಸಾವಿರ ರೈತರು ಹಾನಿಯ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ; ಹಾನಿಯ ಅಂದಾಜು ಮೊತ್ತ ಎಷ್ಟು ?

## ಜಾತಿ ಗಣತಿ ವರದಿ

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ) –**

೧೪೯ (೨೧೮೦) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಡೆಸಿದ ಜಾತಿ ಗಣತಿಯ ವರದಿಯನ್ನು ಏಪ್ರಿಲ್ ೩೦, ೨೦೧೫ರ ಒಳಗಡೆ ಬಿಡುಗಡೆ ಮಾಡುವುದಾಗಿ ಸರ್ಕಾರ ಈ ಹಿಂದೆ ಘೋಷಣೆ ಮಾಡಿದ್ದು ನಿಜವೇ ;

(ಆ) ಹಾಗಿದ್ದಲ್ಲಿ, ಇದುವರೆಗೂ ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡದಿರಲು ಕಾರಣಗಳೇನು ; ಯಾವಾಗ ಬಿಡುಗಡೆ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ೫ ವರ್ಷಗಳಿಂದ ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡುವುದಾಗಿ ಹೇಳುತ್ತಾ ಬಂದಿದ್ದು, ಈಗಲಾದರೂ ವರದಿಯನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

(ಈ) ಜಾತಿ ಗಣತಿಗಾಗಿ ಸರ್ಕಾರ ನಿಗದಿ ಪಡಿಸಿ, ಬಿಡುಗಡೆ ಮಾಡಿ ಖರ್ಚು ಮಾಡಿದ ಅನುದಾನವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಜಾತಿ ಗಣತಿಯ ಗಣಕೀಕರಣವನ್ನು ಯಾವ ಯಾವ ಏಜೆನ್ಸಿಗಳಿಗೆ ನೀಡಲಾಗಿತ್ತು ; ಈ ಏಜೆನ್ಸಿಗಳಿಗೆ ಅನುಮತಿ ನೀಡುವಾಗ ಸರ್ಕಾರ ಅನುಸರಿಸಿರುವ ಮಾನದಂಡಗಳೇನು ;

(ಊ) ಈ ಏಜೆನ್ಸಿಗಳಿಗೆ ಸರ್ಕಾರ ನಿಗದಿ ಪಡಿಸಿದ್ದ ಮೊತ್ತವೆಷ್ಟು ; ಇದುವರೆಗೂ ಬಿಡುಗಡೆ ಮಾಡಿ ವೆಚ್ಚ ಮಾಡಿರುವ ಮೊತ್ತವೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಪ್ರವಾಸಿ ತಾಣಗಳ ಅಭಿವೃದ್ಧಿ

**ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ (ಯಮಕನಮರಡಿ) –**

೧೫೦ (೨೨೧೪) ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಪ್ರವಾಸಿ ತಾಣಗಳಿವೆ ; (ಮತಕ್ಷೇತ್ರವಾರು ವಿವರ ನೀಡುವುದು)

(ಆ) ಈ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕಳೆದ ೩ ವರ್ಷಗಳಲ್ಲಿ ಎಷ್ಟು ಅನುದಾನ ನೀಡಲಾಗಿದೆ ? (ಮತಕ್ಷೇತ್ರವಾರು ವಿವರ ನೀಡುವುದು)

**ಎಸ್. ಮೂರ್ತಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ. ಪಿಸಿ ಕಾಸೂ. ೧೮, ಪ್ರತಿಗಳು ೧೫೦೦

**List of Questions for Oral Answers**

**Total No. of Questions - 15**

# LIST - 10

# KARNATAKA LEGISLATIVE ASSEMBLY

## FIFTEENTH ASSEMBLY

## SECOND SESSION

## Friday, 21st December, 2018

---

**GROUP - 'E'**

1. Minister for Agriculture
2. Minister for Social Welfare
3. Minister for Backward Classes Welfare
4. Minister for Animal Husbandry and Fisheries
5. Minister for Horticulture
6. Minister for Tourism and Sericulture

---

### OWN BUILDING FOR RESIDENTIAL SCHOOLS

**Sri Lingesh K.S. (Belur)-**

136 (2239) Will the Minister for Social Welfare be pleased to state:-

(a) whether it has come to the notice of the Government that Dr. Ambedkar residential school in Bikkodu and Smt. Indira Gandhi Residential School in Hagare of Beluru Taluk are run in rented building;

(b) if so, whether own building would be sanctioned in the current financial year?

## COMPENSATION FOR CROP LOSS

**Sri Harish Poonja (Belthangady)-**

137 (2205) Will the Minister for Agriculture be pleased to state:-

(a) the criterion/guidelines under which the central and state Governments are giving compensation for crop loss under crop insurance scheme;

(b) the quantum of compensation given by the Government to every farmer per acre / hectare based on crop loss;

(c) the quantum of grant earmarked by the state Government for crop loss during the years 2016-17 and 2017-18 and the grant spent; the number of farmers benefited from this scheme ?

## GANGA KALYANA SCHEME

**Sri M. Chandrappa ( Holalkere )-**

138 (2238) Will the Minister for Social Welfare be pleased to state :-

(a) the total number of borewells drilled for Scheduled castes under Ganga kalyana scheme in Holalkere Assembly Constituency for the year 2016-17; (details be furnished)

(b) the number of individual borewells drilled by Dr. B.R. Ambedkar Development Corporation for Scheduled Castes and by Valmiki Development Corporation for Scheduled Tribes in said constituency for the year 2017-18; (details be furnished)

(c) the extent of acres of land should be required for the beneficiaries to drill individual borewells (information be furnished );

(d) the manner in which the tender has been invited to drill these borewells ; the name of agencies from which tender has been invited (details be furnished)

(e) if there is any information that the borewells have been drilled without inviting the tender, the name of the officers who violated the rules and the particulars of action taken against them; (details be furnished )

(f) the manner in which the action has been initiated against Managing Director of the corporation who violated the rules ;

(g) the list of beneficiaries of both development corporations drilled the borewells during the year 2016-17 and 2017-18, the particulars of beneficiaries of land in which borewells have been drilled and the length of feet, survey number of land of each beneficiary and the information of payment made to the borewells of beneficiaries be furnished ?

**SUPPLY OF AGRICULTURAL EQUIPMENTS**

**Sri Aihole D. Mahalingappa ( Raibag )-**

139 (2188) Will the Minister for Agriculture be pleased to state :-

(a) whether the Government is supplying the agricultural equipments such as router, double palti, fodder cutting machine for the purpose of agricultural activities to the farmers of the state ;

(b) if so, the number of equipments supplied by the Government since last 3 years ; the quantum of grant incurred by the Government ; (talukuwise details be furnished )

(c) if not, the reasons thereof ? (complete details be furnished)

**MAINTANANCE OF MONUMENTS**

**Sri Umesh Vishwanath Katti ( Hukkeri )-**

140 (2211) Will the Minister for Tourism and Sericulture be pleased to state :-

(a) whether it has come to the notice of the Government that the ancient and historical monuments located in Vijayapura, Aihole, Pattadakallu, Badami, Savadatti , Belagavi, Kitturu, Nandagad etc, of North Karnataka are being deteriorated without proper maintenance ;

(b) the steps taken by the Government for the protection of monuments ;

(c) the particulars of programmes chalked out by the Government to encourage the tourists to visit the monuments of the said tourist places ;

(d) whether the Government has taken any measures to provide good accommodation / construction of resorts for staying the tourists in the said places ? (details be furnished )

**LEMON DEVELOPMENT BOARD**

**Sri Yashvantarayagouda Vittalgouda Patil (Indi)-**

141 (2184) Will the Minister for Horticulture be pleased to state :-

(a) whether it has come to the notice of the Government that the basic facilities like land, staff, cold storage, market yard, warehouse, procurement centre, revolving fund, training centre, etc are not available for Karnataka State Lemon Development Board located in Indi Town; if so, the measures taken to provide basic facilities ;

(b) the time by when the cold storage would be constructed;

(c) the quantum of grant would be earmarked for procurement centre (revolving fund) when the prices are fallen down ; the time by when it would be implemented;

(d) whether the Government has interested to provide land for building, construction of cold storage, construction of warehouse, market, training centre, laboratory etc, for the development board ;

(e) if so, the measures to be taken by the Government ? (details be furnished )

**HORTICULTURAL SCHEMES**

**Sri M.S. Somalingappa (Siruguppa)-**

142 (2343) Will the Minister for Horticulture be pleased to state:-

(a) the particulars of schemes implemented by the Horticulture department since last 3 years in Siruguppa Assembly Constituency of Bellary District;

(b) the particulars of horticultural crops grown in last 3 years; the quantum of subsidy given therefor ;

(c) the number of beneficiaries who got subsidy under various schemes ? (villagewise complete details be furnished)

**PRAGATHI COLONY SCHEME**

**Dr. Anjali Hemant Nimbalkar ( Khanapur )-**

143 (128 ) Will the Minister for Social Welfare be pleased to state :-

(a) the steps taken by the Government in order to undertake various works under Pragathi colony scheme to provide basic facilities for the colonies of ST families residing in various villages of Khanapur Taluk of Belagavi District;

(b) if so, villagewise and schemewise complete information and the grant released be furnished ?

**SHORTAGE OF STAFF**

**Dr. K. Sudhakar ( Chikkaballapur )-**

144 (2311) Will the Minister for Animal Husbandry and Fisheries be pleased to state;-

(a) whether it has come to the notice of the Government that there is a shortage of group 'D' employees in the taluk office of Assistant Director of the Animal Husbandry Department in Chikkaballapur taluk; if so, the measures taken by the Government in this regard ;

(b) the company by which medicine being supplied for the foot and mouth disease of live stocks ;

(c) whether the quality of medicine has been checked; whether the Government tries to purchase the medicines by the Government companies; (details be furnished)

(d) whether there is a proposal before the Government to set up a veterinary hospital for each five thousand live stock;

(e) whether there is a proposal before the Government to upgrade certain Veterinary Hospitals ? (details be furnished)

**GANGA KALYANA SCHEME**

**Sri Arbail Shivaram Hebbar (Yellapur)-**

145 (2294) Will the Minister for Backward Classes Welfare be pleased to state;-

(a) the number of borewells sanctioned under Ganga Kalyana Scheme by Devaraju Urs Development Corporation since 2015-16 till date in Uttarakannada district ; (talukwise details be furnished)

(b) the number of borewells drilled ;

(c) the number of borewells for which pumpsets are not installed with power connection ?

**ZERO BUDGET NATURAL FARMING**

**Sri V. Sunil Kumar ( Karkala)-**

146 (2344) Will the Minister for Agriculture be pleased to state;-

(a) whether the zero budget natural farming has been implemented in the state; the particulars of districts in which the said method has been implemented ; (districtwise details be furnished)

(b) the outlines of said natural farming method ; whether the farmers are educated in this regard ;

(c) the quantum of amount has been utilised so far for the zero budget natural farming method; the details of farmers who adopted this method be furnished ? (Complete details of farmers along with districtwise information be furnished)

**MAINTENANCE OF HOSTELS**

Sri B. Sriramulu ( Molakalmuru )-

147 (2347) Will the Minister for Social Welfare be pleased to state :-

(a) the quantum of grant sanctioned for the maintenance of hostels in the state since last 3 years ( districtwise and talukwise details be furnished ) ;

(b) the particulars of uniforms being provided for the pre metric and post metric hostel students in the state; (list be furnished)

(c) the name of agencies to whom the tender has been awarded for purchasing of required commodities for the hostels since last 3 years ;

(d) the quantum of amount mentioned in the tender; (districtwise details be furnished)

(e) whether it has come to the notice of the Government that the students are put to hardship due to non availability of food grains and essential commodities at proper time of the said hostels;

(f) if so, the measures taken by the Government in this regard ?

**HORTICULTURAL CROP LOSS DUE TO HEAVY RAIN FALL**

**Sri Sanjeeva Matandoor (Puttur)-**

148 (2207) Will the Minister for Horticulture be pleased to state:-

(a) whether the Government has received a report in respect of Horticultural crop loss due to heavy rainfall in the current year in Dakshina Kannada District;

(b) if so, the total extent of arecanut crop loss in the district; the total number of farmers who have submitted memorandum to the Government regarding crop loss; the estimated amount of crop loss ?

**CASTE CENSUS REPORT**

**Sri Balachandra Lakshmanrao Jarakiholi (Arabavi)-**

149 (2180) Will the Minister for Backward Classes Welfare be pleased to state;-

(a) whether it is a fact that the Government announced earlier that the report of caste census conducted in the state would be released by April 30, 2015 ;

(b) if so, the reasons for not releasing the caste census report so far; the time by when it would be released; (complete information be furnished)

(c) it has been saying since last 5 years that the caste census report would be released, whether the action would be taken to release the report at least for now;

(d) the quantum of grant earmarked , released and spent by the Government for the caste census ; (complete details be furnished)

(e) the names of agencies to whom the data entry of caste census was given; the criterion followed by the Government while giving permission to these agencies ;

(f) the quantum of amount fixed by the Government for these agencies ; the quantum of amount released and spent so far? (complete information be furnished)

**DEVELOPMENT OF TOURIST SPOTS**

**Sri Jarakiholi Satish Lakshmanrao (Yemakanmardi)-**

150 (2214) Will the Minister for Tourism and Sericulture be pleased to state:-

(a) number of tourist spots are there in Belagavi District; (constituency wise details be furnished)

(b) the quantum of grant released since last 3 years for the development of these tourist spots? (constituency wise details be furnished)

**S. MURTHY**
Secretary
Karnataka Legislative Assembly.

Govt. Press, Suvarna Vidhana Soudha Unit, Belgaum, - P7 - wd , Copies - 1300